ಟಿ.ಎಂ. ಮಾನಪ್ಪ, ಶಿವಮೊಗ್ಗ
ಲೇಖನಿ ಮೇಲೋ, ಖಡ್ಗ ಮೇಲೋ?



ಖಡ್ಗವೇ. ಲೇಖನಿಯನ್ನು ಯಾರೂ ತಲೆಗಿಂತ ಎತ್ತರಕ್ಕೆತ್ತಿ ಬಳಸುವುದಿಲ್ಲ.

ವಿದ್ಯಾ ಎನ್. ಪೈ, ಕಾಸರಕೋಡ
ಅಗ್ನಿಸಾಕ್ಷಿಗೂ, ಅಗ್ನಿಪರೀಕ್ಷೆಗೂ ಏನು ವ್ಯತ್ಯಾಸ?
ಗಂಡಿಗಂತೂ ಅಗ್ನಿಸಾಕ್ಷಿಯಾಗಿ ಮದುವೆ; ನಂತರ ಪ್ರತಿದಿನವೂ ಅಗ್ನಿಪರೀಕ್ಷೆ.

ವೈ.ಜಿ. ನರಸಿಂಹನ್, ಶಿವಮೊಗ್ಗ
ಇಂದಿನ ಕಾಲದಲ್ಲಿ ಹಣಕ್ಕೆ ಇರುವ ಬೆಲೆ ಗುಣಕ್ಕೆ ಇಲ್ಲವಲ್ಲಾ, ಯಾಕೆ?
ಗುಣವಂತರೂ ಮಾರಾಟಕ್ಕೆ ಇರುವುದರಿಂದ.

ನಾಜ್ಯೋತಿ, ಹೂವಿನಹಡಗಲಿ
ಸಂಸಾರ ಬಂಧನಕ್ಕೆ ಅರೆಸ್ಟ್ ವಾರೆಂಟ್ ಯಾವುದು ರಾಮ್‌ಜೀ?
ಮೊದಮೊದಲಿಗೆ ಕಾಮ; ನಂತರ ಪ್ರೀತಿ.

ಕಾವ್ಯಶ್ರೀ ಪತ್ರಿಮಠ, ಸುರಪುರ
'ಅಮರತ್ವ' ಎಲ್ಲಿ ಅಡಗಿಹುದು?



ಮರವನ್ನೇ ಮಕ್ಕಳಂತೆ ಸಾಕಿದ ಸಾಲುಮರದ ತಿಮ್ಮಕ್ಕನಂತಹವರಲ್ಲಿ.

ನಾರಾಯಣ ಯಾಜಿ, ಶಿರಾಲಿ
ಮಾತೃ ದೇವೋ ಭವ. ಪಿತೃ ದೇವೋ ಭವ. ಮಕ್ಕಳು...?
'ಪಿತೃ ದೇದೋ ಭವನ್; ಮಾತೃ ದೇದೋ ಗಹನ್' ಎನ್ನುವರೇ ಹೆಚ್ಚು.

ಮಹಾವೀರ ಕಾಸರ, ಶಿವಮೊಗ್ಗ
ಹವಾಮಾನ ಇಲಾಖೆಯವರು 'ಸಾಧಾರಣದಿಂದ ಭಾರಿ ಪ್ರಮಾಣದಲ್ಲಿ ಮಳೆ ಸಾಧ್ಯತೆ' ಎನ್ನುವುದರ ಅರ್ಥ?
ತಾರಸಿಗೆ ಸಾಧಾರಣ, ಝಿಂಕ್ ಷೀಟಿಗೆ ಭಾರಿ ಎಂದು.

ದೇವೇಂದ್ರ, ಕಡೂರು
ಹೊಗಳುವವರು ಒಳ್ಳೆಯವರೋ, ತೆಗಳುವವರು ಒಳ್ಳೆಯವರೋ?
ತೆಗಳುವವರೇ. ಹೊಗಳಿಕೆ ಗಳಿಕೆಗೆ ಕತ್ತರಿ; ತೆಗಳಿಕೆ ಹೆಗ್ಗಳಿಕೆಯ ಸಾಧನೆಗೆ ದಾರಿ.

ನರಸಿಂಹ ಪೈ, ಕಾಸರಕೋಡ
ಆಧುನಿಕ ಮಾನವನ ಜೀವಿತಾವಧಿ ಕಡಿಮೆಯಾಗಲು ಕಾರಣವೇನು?
ತನ್ನ ಅವಧಿಯನ್ನು ಜೀವುವಂತಹ ಕೆಲಸವನ್ನು ತಾನೇ ಮಾಡುವುದರಿಂದ.

ಈರಣ್ಣ ಐ. ದಮಡಿ, ಹಳ್ಳದಕೇರಿ
ಹೊಸ ಕ್ಯಾಲೆಂಡರ್ ಹಾಕಿ ಹೊಸ ವರ್ಷ ಸ್ವಾಗತಿಸಿದೆ. ನೀನು?
ಇಪ್ಪತ್ತೆಂಟು ವರ್ಷ ಹಿಂದಿನ ಕ್ಯಾಲೆಂಡರ್ ಹಾಕಿದೆ. ಎಲ್ಲವೂ ಸೇಮ್ ಟು ಸೇಮ್.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
ಸತ್ತವರೆಲ್ಲಾ ಎಲ್ಲಿಗೆ ಹೋಗುತ್ತಾರೆ?
ಇರುವವರ ನೆನಪಿನ ಕೋಶಗಳಲ್ಲಿ ಬಂಧಿಗಳಾಗುತ್ತಾರೆ.

ಬಾ.ರಂ. ಸುರೇಶ, ಶಿವಮೊಗ್ಗ
ಮದುವೆಯಲ್ಲಿ ಗಂಡುಹೆಣ್ಣಿಗೆ ಹೂವಿನಿಂದ ಮಾಡಿದ ಉರುಳಾಟ ಆಡಿಸುವುದಕ್ಕೆ ಕಾರಣವೇನಿರಬಹುದು ಶಿವಾ?
ಹೂವಿನಂತೆಯೇ ದಾಂಪತ್ಯ ಪ್ರಫುಲ್ಲವಾಗಿರಲಿ ಎಂದು ಸೂಚಿಸಲು.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಶ್ರೀಮಂತರು ಬಡವರಂತೆ ನಟಿಸಲು ಕಾರಣವೇನು?
ಸಾಲ, ಡೊನೇಷನ್ ಕೇಳುವವರಿಂದ ತಪ್ಪಿಸಿಕೊಳ್ಳಲು.

ರತ್ನಾ ರಾಜ್‌ಕುಮಾರ್, ಹಾಸನ
ನಾನು ನೀನು ಎನ್ನುವ ಬದಲು ನೀನು ನಾನು ಎಂದರೆ?
ಇಬ್ಬರನ್ನೂ ಹೊಂದಿದ 'ನಾವು' ಸರ್ವ ಕಷ್ಟಗಳನ್ನೂ ಸಹ್ಯವಾಗಿಸುವ ನಾವೆ.

## ಬಹುಮಾನಿತ ಪ್ರಶ್ನೆ

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ನಾಲಿಗೆ ಹಲ್ಲಿನಂತೆ ಕಠಿಣವಾಗಿದ್ದರೆ ಏನಾಗುತ್ತಿತ್ತು ರಾಮ್‌ಜೀ?
ಹಲ್ಲುನಾಲಿಗೆಗಳ ಘರ್ಷಣೆಯಿಂದ ಮಾತನಾಡುವಾಗ ಕಿಡಿಗಳು ಹಾರುತ್ತಿದ್ದವು.

ಪ್ರೇಮಚಂದ್ರ, ಬೆಂಗಳೂರು
'ವಿದ್ಯಾ ದದಾತಿ ವಿನಯಂ' ಎಂದರೇನು? ಅದನ್ನು ಎಲ್ಲಿ ಕಾಣಲು ಸಾಧ್ಯ?
ವಿದ್ಯಾಳು ವಿನಯನಿಗೆ ಮೊಸರು (ದಧಿ) ಕೊಡುತ್ತಾಳೆ ಎಂದರ್ಥ. ಇದನ್ನು ಡೈರಿ ಕೌಂಟರಲ್ಲಿ ನೋಡಬಹುದು.

ಎಂ.ಕೆ. ರವಿಕಾಂತ, ತುಮಕೂರು
ಮಾಲ್‌ನಲ್ಲಿ ಸೊಲ್ಲೆತ್ತದೆ ಚಿತ್ರ ನೋಡಿಬರುವ ಪ್ರೇಕ್ಷಕನಿಗೂ, ವಿಧಾನಸಭಾ ಕಲಾಪದಲ್ಲಿ ಪ್ರಶ್ನೆ ಕೇಳದೆ ಹೊರಬರುವ ಶಾಸಕನಿಗೂ ವ್ಯತ್ಯಾಸ?
ಪ್ರೇಕ್ಷಕ ಮಾತನಾಡಿದರೆ ಪ್ರಯೋಜನವಿಲ್ಲ, ಶಾಸಕ ಪ್ರಯೋಜನವಿಲ್ಲದೆ ಮಾತನಾಡಲ್ಲ.

ಹೇಮಾವತಿ ಜೈನ್, ಹೂವಿನಹಡಗಲಿ
ಉತ್ತರರಾಮನ ಕರೆಂಟಿಗೆ ಮೇಯ್ನ್ ಸ್ಟೇಷನ್, ಸಬ್ ಸ್ಟೇಷನ್‌ಗಳು ಉಂಟೆ?



ಊಹೂಂ. ಇದು ನೇರವಾಗಿ ಜನರನ್ನೇ ತಲುಪುವ ಸೋಲಾರ್ ಎನರ್ಜಿ.

ಅಕ್ಷಯ ಜೈನ್, ಹೂವಿನಹಡಗಲಿ
ಕರೆಂಟ್ ರೀಡಿಂಗ್ ಯೂನಿಟ್‌ಗಳಲ್ಲಿದ್ದರೆ ಪ್ರೀತಿಯ ರೀಡಿಂಗ್ ಎಲ್ಲಿರುತ್ತದೆ?
ಲವ್ ಮೆಸೇಜ್‌ಗಳಲ್ಲಿ, 'ಯೂನಿಟಿ'ಯಲ್ಲಿ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಮುಂದಿನ ಚುನಾವಣೆಯಲ್ಲಿ ಅಮೂಲ್ಯ ಲಿಯೋನ, ಆರ್ದ್ರಾ ನಾರಾಯಣನ್‌ಗೆ ಸುಲಭವಾಗಿ ಟಿಕೆಟ್ ಸಿಗಬಹುದಲ್ಲವೆ?
ನಿಶ್ಚಿತವಾಗಿ. ಪ್ರತಿ ಯುದ್ಧಕ್ಕೂ ಭೇರಿ, ನಗಾರಿ, ಕಹಳೆಗಳು ಇರಲೇಬೇಕಲ್ಲ!

■ ರಾಮ್